# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಯಲಹಂಕ ಉಪನಗರ ಉಪವಿಭಾಗ, ಬೆಂಗಳೂರು.

**ದಿನಾಂಕ:19-03-2022 ರಂದು ಬೆಳಿಗ್ಗೆ 11.00 ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ:04 ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ಕಾರ್ಯದರ್ಶಿಗಳ ಜೊತೆ ಯಲಹಂಕ ಉಪನಗರ ಉಪವಿಭಾಗ ಕಛೇರಿಯಲ್ಲಿ ನಡೆದ ವಾರ್ಡ್ ಕಮಿಟಿ ಸಭೆಯ ನಡವಳಿಗಳು.**

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದ ಅಧಿಕಾರಿಗಳ ಹೆಸರು | ಪದನಾಮ |
|---|---|---|
| 1 | ಶ್ರೀ.ಎಸ್.ಪಿ.ರಂಗನಾಥ್ ರವರು | ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿ.ಬಿ.ಎಂ.ಪಿ |
| 2 | ಶ್ರೀ.ಸಚಿನ್.ಹೆಚ್.ಪಿ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪನಗರ ಉಪವಿಭಾಗ |
| 3 | ಶ್ರೀ.ಕಿರಣ್.ಬಿ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಪ್ರಾಜೆಕ್ಟ್ |
| 4 | ಶ್ರೀ.ಎಸ್.ಜಿ.ಬೆಟ್ಟಸ್ವಾಮಿ | ಸ.ಕಾ.ಅ ರಸ್ತೆ ಮೂಲಭೂತ ಸೌಕರ್ಯ |
| 5 | ಶ್ರೀ.ಎನ್.ಡಿ.ಮೋಹನ್ | ಸಹಾಯಕ ಅಭಿಯಂತರರು, ವಾರ್ಡ್ ನಂ:04 |
| 6 | ಶ್ರೀ.ವಿನಾಯಕ.ಕೆ.ಎಂ | ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 7 | ಶ್ರೀ.ಮಂಜುನಾಥ.ಎಸ್.ಎಂ | ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 8 | ಶ್ರೀ.ಮಧುಸೂಧನ್.ಎ.ಎನ್ | ಎಲೆಕ್ಟ್ರಿಕಲ್ ಕಂಟ್ರಾಕ್ಟರ್ |
| 9 | ಶ್ರೀ.ಟಿ.ಕೆ.ಪುಟ್ಟಸ್ವಾಮಿ | ವಾರ್ಡ್ ನಂ:04 ಕಮಿಟಿ ಮೆಂಬರ್ |
| 10 | ಶ್ರೀ.ರಾಮಣ್ಣ | ಆರ್.ಡಬ್ಲ್ಯೂ.ಎ |
| 11 | ಶ್ರೀ.ಬಿ.ಕೆ.ವೈ.ಕೊಪ್ಪುವರನ್ | ಆರ್.ಡಬ್ಲ್ಯೂ.ಎ |
| 12 | ಶ್ರೀ.ಬಿ.ಎಸ್.ಬೋರೇಗೌಡ | ವಾರ್ಡ್ ಕಮಿಟಿ ಸದಸಸ್ಯರು |
| 13 | ಶ್ರೀ.ಜಯರಾಮಶೆಟ್ಟಿ | ವಾರ್ಡ್ ಕಮಿಟಿ ಸದಸಸ್ಯರು |
| 14 | ಶ್ರೀ.ಉದಯ್‌ಕುಮಾರ್ | ವಾರ್ಡ್ ಕಮಿಟಿ ಸದಸಸ್ಯರು |
| 15 | ಶ್ರೀ.ಮಾಲತೇಶ್, ಕೋಲೂರು | ವಾರ್ಡ್ ಕಮಿಟಿ ಸದಸಸ್ಯರು |

ಸಹಾಯಕ ಅಭಿಯಂತರರು ಆದ & ವಾರ್ಡ್ ಕಮಿಟಿ ಕಾರ್ಯಾದೇಶಿಯಾದ **ಶ್ರೀ.ಡಿ.ಎನ್.ಮೋಹನ್, ಸಹಾಯಕ ಅಭಿಯಂತರರು, ಯಲಹಂಕ ಉಪನಗರ ಉಪವಿಭಾಗ** ರವರು ಸಭೆಗೆ ಹಾಜರಿದ್ದು, ನೋಡಲ್ ಅಧಿಕಾರಿಗಳು ಹಾಗೂ ಭಾಗವಹಿಸಿದ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲು ನೋಡಲ್ ಅಧಿಕಾರಿಯನ್ನು ಕೋರಿದರು.

ಶ್ರೀ.ಎಸ್.ಪಿ.ರಂಗನಾಥ್ ರವರು ಮುಖ್ಯ ಅಭಿಯಂತರರು (ಯಲಹಂಕ), ಬಿ.ಬಿ.ಎಂ.ಪಿ ಹಾಗೂ ಸಮಿತಿಯ ನೋಡಲ್ ಅಧಿಕಾರಿಯವರು ಸಭೆಯನ್ನು ಪ್ರಾರಂಭಿಸಿ ಈ ದಿನದ ಸಭೆಯಲ್ಲಿ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ ವಿವರಣೆ ಕೇಳಿದರು.

| ಕ್ರ.ಸಂ | ವಿಷಯ ಸೂಚಿ | ನಿರ್ಣಯ | ಕ್ರಮತೆಗೆದು ಕೊಳ್ಳಬೇಕಾಗಿರುವ ಅಧಿಕಾರಿ / ಇಲಾಖೆ |
|---|---|---|---|
| 1 | 10ನೇ ಬಿ ಮುಖ್ಯರಸ್ತೆಯ ನಿವಾಸಿಗಳಾದಂತಹ ಶ್ರೀ.ಮಾಲತೇಶ್ ರವರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಂದ ಒಳಚರಂಡಿ ನಿರ್ಮಿಸಿದ ನಂತರ ರಸ್ತೆಯನ್ನು ಡಾಂಬರೀಕರಣ ಮಾಡಲು ಕೋರಿರುತ್ತಾರೆ. | ಬಿ.ಡಬ್ಲ್ಯೂ.ಎಸ್.ಎಸ್.ಬಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರಿಗೆ ಕ್ರಮಕೈಗೊಳ್ಳಲು ಸೂಚಿಸಲಾಗಿದೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಯಲಹಂಕ |

| | | | |
|---|---|---|---|
| 2 | ವಾರ್ಡ್ ನಂ:04 ರಲ್ಲಿ ಮರಗಳಿಂದ ಎಲೆಗಳು ಉದುರುತ್ತಿದ್ದು, ಡ್ರೈನೇಜ್ ಬ್ಲಾಕ್ ಆಗುತ್ತಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ. | ಅರಣ್ಯ ಇಲಾಖೆ ರವರಿಗೆ ಕ್ರಮಕೈಗೊಳ್ಳಲು ಸೂಚಿಸಲಾಗಿದೆ | ಅರಣ್ಯ ಇಲಾಖೆ |
| 3 | ವಿಷ್ಣು ಪಾರ್ಕ್‌ನ ರಸ್ತೆಯ ಎರಡು ಬದಿಯಲ್ಲಿ ವಾಹನ ನಿಲುಗಡೆಯಿಂದ ಸಾರ್ವಜನಿಕರಿಗೆ ತೊಂದರೆ ಯಾಗುತ್ತಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಿಪಡಿಸಿರುತ್ತಾರೆ. | ಟ್ರಾಫಿಕ್ ಪೋಲೀಸ್ ಇಲಾಖೆ ರವರಿಗೆ ಕ್ರಮಕೈಗೊಳ್ಳಲು ಸೂಚಿಸಲಾಗಿದೆ. | ಟ್ರಾಫಿಕ್ ಪೋಲೀಸ್ ಯಲಹಂಕ |
| 4 | ಜ್ಞಾನಜ್ಯೋತಿ ಕಾಲೇಜಿನ ಹತ್ತಿರ ವಾಹನಗಳನ್ನು ಪಾರ್ಕಿಂಗ್ ಮಾಡಿದ್ದು, ಬೇರೆ ವಾಹನಗಳು ಹಾಗೂ ಸಾರ್ವಜನಿಕರು ಓಡಾಡಲು ತೊಂದರೆಯಾಗುತ್ತಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ. | ಟ್ರಾಫಿಕ್ ಪೋಲೀಸ್ ಇಲಾಖೆ ರವರಿಗೆ ಕ್ರಮಕೈಗೊಳ್ಳಲು ಸೂಚಿಸಲಾಗಿದೆ. | ಟ್ರಾಫಿಕ್ ಪೋಲೀಸ್ ಯಲಹಂಕ |
| 5 | ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಾಮಗಾರಿ ಸರಿಯಾಗಿ ಕ್ಯೂರಿಂಗ್ ಆಗದೇ ತೊಂದರೆ ಆಗುತ್ತಿರುವ ಬಗ್ಗೆ ವ್ಯಕ್ತಪಡಿಸಿರುತ್ತಾರೆ. | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಇದರ ಬಗ್ಗೆ ಮಾತನಾಡಿ ಸೂಕ್ತ ಕ್ರಮಕೈಗೊಳ್ಳುವುದಾಗಿ ತಿಳಿಸಿರುತ್ತಾರೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 6 | ವಾರ್ಡ್ ನಂ:04 ಯಲಹಂಕ ಉಪನಗರ ವ್ಯಾಪ್ತಿಯಲ್ಲಿ ಬರುವ ಅಳ್ಳಾಳಸಂದ್ರ ಕೆರೆಯಲ್ಲಿ ಮೀನು ಅಭಿವೃದ್ಧಿಪಡಿಸಲು ಉದ್ದೇಶಿತ ಶ್ರೀ.ಬಾಲಾಜಿ ಮೀನುಗಾರರ ಸಹಾಯಕ ಸಂಘ (ನಿ..,) ಸಂಘ ಸ್ಥಾಪಿಸುವ ಬಗ್ಗೆ ಲಿಖಿತವಾಗಿ ಪತ್ರವನ್ನು ದಿ:21-09-2021 ರಂದು ವಾರ್ಡ್ ಕಮಿಟಿ ಸಭೆಗೆ ಸಲ್ಲಿಸಿ ನಡವಳಿಯಲ್ಲಿಸೇರಿಸಲು ಕೋರಿರುತ್ತಾರೆ | ಅದರಂತೆ ಸಭೆಯಲ್ಲಿ ಚರ್ಚಿಸಿ ಮೀನುಗಾರರ ಸಹಕಾರ ಸಂಘ ಸ್ಥಾಪಿಸಲು ಅನುಮೋದನೆ ನೀಡಲಾಗಿದೆ | ಸದಸ್ಯ ಕಾರ್ಯದರ್ಶಿರವರು ವಾರ್ಡ್ ಸಮಿತಿ |

ಈ ಮೇಲ್ಕಂಡ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ತಾವು ತೆಗೆದುಕೊಂಡಿರುವ ಕ್ರಮಗಳನ್ನು ಮುಂದಿನ ವಾರ್ಡ್ ಕಮಿಟಿ ಸಭೆಯು ನಡೆಯುವ ವೇಳೆಗಿಂತ ಮುಂಚಿತವಾಗಿ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

ಶ್ರೀ.ಎನ್.ಡಿ.ಮೋಹನ್
ಸಹಾಯಕ ಅಭಿಯಂತರರು ಹಾಗೂ
ಕಾರ್ಯದರ್ಶಿಗಳು, ವಾರ್ಡ್ ನಂ:04

ಶ್ರೀ.ಎಸ್.ಪಿ.ರಂಗನಾಥ್ ರವರು
ಮುಖ್ಯ ಅಭಿಯಂತರರು
ಹಾಗೂ ನೋಡಲ್ ಅಧಿಕಾರಿಗಳು.

ಪ್ರತಿಯನ್ನು:-

1) ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
2) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ (ಯಲಹಂಕ) / ವಿದ್ಯುತ್, ಬಿ.ಬಿ.ಎಂ.ಪಿ
3) ಸಹಾಯಕ ಕಾರ್ಯಪಾಲಕ ಅಭಿಯಂತರರು, ರಾಜಕಾಲುವೆ (ಯಲಹಂಕ)

4) ಅಧೀಕ್ಷಕರು ತೋಟಗಾರಿಕೆ ಇಲಾಖೆ, ಬಿ.ಬಿ.ಎಂ.ಪಿ (ಯಲಹಂಕ)
5) ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ (ಯಲಹಂಕ)
6) ಠಾಣಾಧಿಕಾರಿಗಳು / ಟ್ರಾಫಿಕ್ ಠಾಣಾಧಿಕಾರಿಗಳು, ಪೋಲೀಸ್ ಠಾಣೆ, ಯಲಹಂಕ ಉಪನಗರ / ಯಲಹಂಕ ರವರಿಗೆ.
7) ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆರೆ ಅಭಿವೃದ್ಧಿ (ಯಲಹಂಕ)
8) ಅರಣ್ಯ ಅಧಿಕಾರಿ, ಯಲಹಂಕ ವಲಯ, ಬಿ.ಬಿ.ಎಂ.ಪಿ, ಯಲಹಂಕ.
9) ಸಹಾಯಕ ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ, ಬಿ.ಬಿ.ಎಂ.ಪಿ, ಬ್ಯಾಟರಾಯನಪುರ.
10) ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ, ಬಿ.ಬಿ.ಎಂ.ಪಿ (ಯಲಹಂಕ).
11) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ ಒಳಚರಂಡಿ, ಯಲಹಂಕ.
12) ಆರೋಗ್ಯ ವೈದ್ಯಾಧಿಕಾರಿಗಳು, ಯಲಹಂಕ ವಲಯ, ಬಿ.ಬಿ.ಎಂ.ಪಿ, ಬೆಂಗಳೂರು.
13) ಪಶು ಸಂಗೋಪನೆ ಇಲಾಖೆ ರವರ ಮಾಹಿತಿಗಾಗಿ ಸಲ್ಲಿಸಿದೆ.